# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರಿಗೆ 2021-22ನೇ ಸಾಲಿಗೆ SCSP ಮತ್ತು TSP ಯೋಜನೆಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**

1. ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಪತ್ರ ಸಂಖ್ಯೆ:ಆರ್ ಡಿಪಿಆರ್ ಯು 07 SC/ST & OBC ಕೋಶದ 2021/365, ದಿನಾಂಕ:18-10-2021.
2. ಸಮಾಜ ಕಲ್ಯಾಣ ಇಲಾಖೆಯ ಟಿಪ್ಪಣಿ ಸಂಖ್ಯೆ:ಸಕಇ 653 ಎಸ್‌ಎಲ್‌ಪಿ 2021, ದಿನಾಂಕ:10-02-2022.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಪತ್ರದಲ್ಲಿ ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರು 2021-22 ನೇ ಸಾಲಿನ SCSP/TSP ಕಾರ್ಯಕ್ರಮಗಳ ಕ್ರಿಯಾಯೋಜನೆ Scheme–wise Outlay on SCSP/TSP 2021-22ನೇ ಸಾಲಿಗೆ ವಿಶ್ವವಿದ್ಯಾಲಯದ SCSP/TSP ಕಾರ್ಯಕ್ರಮಗಳಿಗೆ ಅನುದಾನ ನಿಗಧಿಪಡಿಸಲಾಗಿದ್ದು, ಸದರಿ SCSP-TSP ಅನುದಾನದ ಕಾರ್ಯಕ್ರಮಗಳ ಕ್ರಿಯಾ ಯೋಜನೆಯನ್ನು ದಿನಾಂಕ:08-10-2021 ರಂದು ನಡೆದ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ ಸಭೆಯಲ್ಲಿ ಕ್ರಿಯಾ ಯೋಜನೆಯನ್ನು ಅನುಮೋದಿಸಿದ್ದು, ಈ ಕೆಳಗಿನಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರಣೆ | SCSP ಅನುದಾನ (ರೂ.ಲಕ್ಷಗಳಲ್ಲಿ) | TSP ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಕುಟುಂಬದ ವಾರ್ಷಿಕ ಆದಾಯ 5 ಲಕ್ಷದ ಮಿತಿಯೊಳಗಿರುವ SC & ST ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ | 48.00 | 30.00 |
| 2 | ಕುಟುಂಬದ ವಾರ್ಷಿಕ ಆದಾಯ 2.5 ಲಕ್ಷದಿಂದ 10 ಲಕ್ಷದ ಮಿತಿಯೊಳಗಿರುವ SC & ST ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳ 50% ಮರುಪಾವತಿಸಲು ಅನುದಾನ | 1.50 | 1.00 |
| 3 | ವಿದ್ಯಾರ್ಥಿಗಳಿಗೆ ರೆಫೆರನ್ಸ್ ಪುಸ್ತಕ ಪೂರೈಕೆಗಾಗಿ ಹಾಗೂ ಡಿಜಿಟಲ್ ಗ್ರಂಥಾಲಯ ಸ್ಥಾಪಿಸಲು | 15.00 | 10.00 |
| 4 | ಹೆಚ್ಚುವರಿ ಭೋಜನಾ ವೆಚ್ಚದ ಅನುದಾನ | 6.00 | 2.00 |
| 5 | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಬಾಡಿಗೆ | 3.00 | 2.00 |
| 6 | ಕೌಶಲ್ಯ ಅಭಿವೃದ್ಧಿ ಹಾಗೂ ಗಣಕಯಂತ್ರ/ತಂತ್ರಜ್ಞಾನ ಕೇಂದ್ರ ಸ್ಥಾಪನೆ | 36.00 | 14.00 |

| | | | |
|---|---|---|---|
| 7 | ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು, ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ, ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳು ಹಾಗೂ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ವಿಚಾರ ಸಂಕಿರ್ಣಗಳನ್ನು ಏರ್ಪಡಿಸುವುದು ಹಾಗೂ ಇತರೆ ವಿಶ್ವವಿದ್ಯಾಲಯ ಸಂಘ ಸಂಸ್ಥೆಗಳು ಏರ್ಪಡಿಸುವ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ವಿಚಾರ ಸಂಕಿರ್ಣಗಳಲ್ಲಿ ಭಾಗವಹಿಸುವ ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನೊಂದಣಿ ಫೀ ಪ್ರಯಾಣ ಭತ್ಯೆ ಪಾವತಿಸುವ. | 8.00 | 2.00 |
| 8 | ರೂರಲ್ ಇಮರ್ಷನ್, ಇಂಟರ್ನ ಶಿಫ್ ಪ್ರೋಗ್ರಾಮ್ ಪ್ರೋಜೆಕ್ಟ್ ವರ್ಕ್ ಕಾರ್ಯಕ್ರಮಗಳ ದತ್ತಾಂಶ ಸಂಗ್ರಹಣ ಮತ್ತು ವರದಿ ಮುದ್ರಣಕ್ಕೆ ಆರ್ಥಿಕಧನ ಸಹಾಯ | 5.00 | 2.50 |
| 9 | ಆಡಳಿತಾತ್ಮಕ ವೆಚ್ಚ | 1.50 | 0.50 |
| 10 | ವ್ಯಾಯಾಮ ಶಾಲೆ(ಜಿಮ್) ಸ್ಥಾಪನೆ | 8.00 | 2.00 |
| | ಒಟ್ಟು | 132.00 | 66.00 |

ಮೇಲೆ ಓದಲಾದ(2)ರ ಟಿಪ್ಪಣಿಯಲ್ಲಿ 2021-22ನೇ ಸಾಲಿನಲ್ಲಿ ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರಿಗೆ ಎಸ್.ಸಿ.ಎಸ್.ಪಿ ರಡಿ ರೂ.1.32 ಕೋಟಿಗಳು ಮತ್ತು ಟಿ.ಎಸ್.ಪಿ.ರಡಿ ರೂ.66.00 ಲಕ್ಷಗಳನ್ನು ನೀಡಲಾಗಿದೆ. ಸದರಿ ಅನುದಾನದನ್ವಯ ರಾಜ್ಯ ಅಭಿವೃದ್ಧಿ ಪರಿಷತ್ತಿನಲ್ಲಿ ಅನುಮೋದನೆಗೊಂಡಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಈಗಾಗಲೇ ತಿಳಿಸಲಾಗಿದೆ. ಸದರಿ ಕ್ರಿಯಾ ಯೋಜನೆಯಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಆಡಳಿತ ವೆಚ್ಚಕ್ಕೆ ಒಟ್ಟು ರೂ.2.00 ಲಕ್ಷಗಳು ಮತ್ತು ವಿದ್ಯಾರ್ಥಿಗಳಿಗೆ ವಸತಿ ನಿಲಯದ ಬಾಡಿಗೆ ರೂ.5.00 ಲಕ್ಷಗಳನ್ನು ಹೊರತುಪಡಿಸಿ ಉಳಿದ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಗಿದೆ ಹಾಗೂ ಬಾಡಿಗೆ ವೆಚ್ಚ ರೂ.5.00 ಲಕ್ಷಗಳು ಮತ್ತು ಆಡಳಿತ ವೆಚ್ಚ ರೂ.2.00 ಲಕ್ಷಗಳನ್ನು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಒದಗಿಸಲು ವೆಚ್ಚ ಮಾಡಬಹುದಾಗಿದೆ ಎಂದು ಅಭಿಪ್ರಾಯ/ಸಹಮತಿ ನೀಡಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 210 ಜಿಪಸ 2021, ಬೆಂಗಳೂರು, ದಿನಾಂಕ:28-02-2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2021-22ನೇ ಸಾಲಿನಲ್ಲಿ ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರಿಗೆ ಎಸ್.ಸಿ.ಎಸ್.ಪಿ. ರಡಿ ರೂ.1.32 ಕೋಟಿಗಳು ಮತ್ತು ಟಿ.ಎಸ್.ಪಿ.ರಡಿ ರೂ.66.00 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಅನುದಾನದನ್ವಯ ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದ ಲೆಕ್ಕ ಶೀರ್ಷಿಕೆ 2515-00-102-0-13ಕ್ಕೆ ಸಂಬಂಧಿಸಿದಂತೆ 2021-22ನೇ ಸಾಲಿನ SCSP-TSP ಯೋಜನೆಗಳ ಕ್ರಿಯಾಯೋಜನೆಗೆ ಈ ಕೆಳಗಿನಂತೆ ಅನುಮೋದನೆ ನೀಡಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರಣೆ | SCSP ಅನುದಾನ (ರೂ.ಲಕ್ಷಗಳಲ್ಲಿ) | TSP ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಕುಟುಂಬದ ವಾರ್ಷಿಕ ಆದಾಯ 5 ಲಕ್ಷದ ಮಿತಿಯೊಳಗಿರುವ SC & ST ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ | 52.50 | 32.50 |
| 2 | ಕುಟುಂಬದ ವಾರ್ಷಿಕ ಆದಾಯ 2.5 ಲಕ್ಷದಿಂದ 10 ಲಕ್ಷದ ಮಿತಿಯೊಳಗಿರುವ SC & ST ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳ 50% ಮರುಪಾವತಿಸಲು ಅನುದಾನ | 1.50 | 1.00 |
| 3 | ವಿದ್ಯಾರ್ಥಿಗಳಿಗೆ ರೆಫೆರನ್ಸ್ ಪುಸ್ತಕ ಪೂರೈಕೆಗಾಗಿ ಹಾಗೂ ಡಿಜಿಟಲ್ ಗ್ರಂಥಾಲಯ ಸ್ಥಾಪಿಸಲು | 15.00 | 10.00 |
| 4 | ಹೆಚ್ಚುವರಿ ಭೋಜನಾ ವೆಚ್ಚದ ಅನುದಾನ | 6.00 | 2.00 |
| 5 | ಕೌಶಲ್ಯ ಅಭಿವೃದ್ಧಿ ಹಾಗೂ ಗಣಕಯಂತ್ರ/ತಂತ್ರಜ್ಞಾನ ಕೇಂದ್ರ ಸ್ಥಾಪನೆ | 36.00 | 14.00 |
| 6 | ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು, ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ, ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳು ಹಾಗೂ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ವಿಚಾರ ಸಂಕಿರ್ಣಗಳನ್ನು ಏರ್ಪಡಿಸುವುದು ಹಾಗೂ ಇತರೆ ವಿಶ್ವವಿದ್ಯಾಲಯ ಸಂಘ ಸಂಸ್ಥೆಗಳು ಏರ್ಪಡಿಸುವ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸುವ ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನೊಂದಣಿ ಫೀ ಪ್ರಯಾಣ ಭತ್ಯೆ ಪಾವತಿಸುವ. | 8.00 | 2.00 |
| 7 | ರೂರಲ್ ಇಮರ್ಷನ್, ಇಂಟರ್ನ ಶಿಫ್ ಪ್ರೋಗ್ರಾಮ್ ಪ್ರೋಜೆಕ್ಟ್ ವರ್ಕ್ ಕಾರ್ಯಕ್ರಮಗಳ ದತ್ತಾಂಶ ಸಂಗ್ರಹಣ ಮತ್ತು ವರದಿ ಮುದ್ರಣಕ್ಕೆ ಆರ್ಥಿಕ ಧನಸಹಾಯ | 5.00 | 2.50 |
| 8 | ವ್ಯಾಯಾಮ ಶಾಲೆ(ಜಿಮ್) ಸ್ಥಾಪನೆ | 8.00 | 2.00 |
| | ಒಟ್ಟು | 132.00 | 66.00 |

ಈ ಆದೇಶವನ್ನು ಸರ್ಕಾರದ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 2021, ದಿನಾಂಕ:31-12-2021ರಲ್ಲಿ ಆಡಳಿತ ಇಲಾಖೆಗಳ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. M. Raju 28/2/22

**(ಎಂ.ಎಂ.ರಾಜು)**

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

28/2/22

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ಸಂ.5398) ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.
4. ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು.
7. ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಗದಗ.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
9. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು.
10. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ(ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.